ಶ್ರೀ ಬಿ. ವಿ ಕಕ್ಕಿಲಾಯ.—ಚಿತ್ರದುರ್ಗದಲ್ಲಿ ಇ.ಎಸ್.ಐ. ಆಸ್ಪತ್ರೆಗೆ ಈಗ ಎಲ್ಲ ಫುಲ್ ಫ್ಲೆಡ್ಜ್ಡ್ ಆಫೀಸ್ ಮಾಡಿದ್ದೇವೆಂದು ಹೇಳಿದ್ದೀರಿ. ಆಸ್ಪತ್ರೆಗೆ ಬೇಕಾದಷ್ಟಾಕಿ ಎಲ್ಲ ಸಿಬ್ಬಂದಿ, ಅಧಿಕಾರಿಗಳನ್ನೂ ಅಲ್ಲಿಗೆ ಪೋಸ್ಟ್ ಮಾಡಿ ಸರಿಯಾಗಿ ನಡೆಯುತ್ತಿದೆ ಎಂಬುದಾಗಿತಾವು ಭರವಸೆಯನ್ನು ಕೊಟ್ಟಿದ್ದೀರಿ, ಇದು ನಿಜವೇ ?

† ಶ್ರೀ ಆರ್. ಎಸ್. ಪಾಟೀಲ್.—೧೨-೧೨-೧೯೭೮ ರಿಂದ ಫುಲ್ ಫ್ಲೆಡ್ಜ್ಡ್ ಆಫೀಸ್ ಆಲ್ಲಿ ನಡೆಯುತ್ತಿದೆ.

NRWS Scheme at the Kalasur-Tugaon Village of Bhalki Taluk.

218 SRI BHIMANNA KHANDRE (Bhalki).—Will the Minister for Rural Development and Panchayati Raj be pleased to state :—

(a) whether the NRWS Scheme at the Kalasar-Tugaon village of Bhalki Taluk is not working as a 10 HP motor has not been installed instead of the 5 H.P. Motor.

(b) if so, whether Government intend to take immediate action to replace the present 5 H.P Motor and fix up a 10 H P. Motor and start the scheme immediately ?

SRI K. B. SHIVIAH (Minister for Horticulture and Sericulture) [on behalf of SRI K. PRABHAKAR (Minister for Rural Development and Panchayati Raj.)].—

(a) No.

(b) In view of the reply to question "a" this does not arise.

ಶ್ರೀ ಭೀಮಣ್ಣ ಖಂಡ್ರೆ.—ಬಾಲ್ಕಿ ತಾಲ್ಲೂಕಿನ ಕಲಸಾರೆ-ತುಗಾನ್ ಗ್ರಾಮದ ರಾಷ್ಟ್ರೀಯ ನೀರು ಸರಬರಾಜು ಯೋಜನೆಯು ಮುಗಿದು ೨ ವರ್ಷಗಳಾದರೂ ಕೂಡ ಅಲ್ಲಿಗೆ ನೀರು ಮಾತ್ರ ಬರುತ್ತಿಲ್ಲ. ಇದರ ಬಗ್ಗೆ ನಾನು ಪಿ.ಎಚ್.ಇ. ಇಲಾಖೆಯ ಸಂಬಂಧಪಟ್ಟವರಿಗೆ ೧೦ ಸಾರಿ ಕಂಪ್ಲೇಂಟ್ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳ ಜೊತೆಯಲ್ಲಿ ಎರಡು ಸಾರಿ ಮಾತನಾಡಿದ್ದೇನೆ. ಮತ್ತೆ ಜಿಲ್ಲಾಧಿಕಾರಿಗಳವರ ಜೊತೆಯಲ್ಲಿ ಎರಡು ಸಾರಿ ಮಾತನಾಡಿದ್ದೇನೆ. ಆದಕ್ಕೆ ಜಿಲ್ಲಾಧಿಕಾರಿಯವರು ಡೈರೆಕ್ಷನ್ ಕೊಟ್ಟಿದ್ದರೂ ಇದುವರೆಗೂ ಯಾವುದೇ ಕೆಲಸವಾಗಿಲ್ಲ. ಪಿ.ಎಚ್.ಇ. ಇಲಾಖೆಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದರೆ ತಾವು ಇಲ್ಲಿ ೫ ಹೆಚ್.ಪಿ. ಯಿಂದ ೧೦ ಎಚ್.ಪಿ.ಗೆ ಬದಲಾಯಿಸುವುದು ಆವಶ್ಯಕತೆ ಇಲ್ಲ. ನೀರು ಬರುತ್ತಿದೆ ಎಂಬುದಾಗಿ ತಿಳಿಸಿದ್ದೀರಿ. ಇದರ ಬಗ್ಗೆ ತಾವು ಬೇಕಾದರೆ ಜಿಲ್ಲಾಧಿಕಾರಿಗಳಿಗೆ ಬರೆದು ತಿಳಿದು ಕೊಳ್ಳಿ. ಆವರು ನೀರು ಬರುತ್ತಿಲ್ಲ ಎಂಬುದಾಗಿ ನಿಮಗೆ ತಿಳಿಸಿದರೆ ಪಿ.ಎಚ್.ಇ. ಇಲಾಖೆಯವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಕೆ. ಬಿ. ಶಿವಮ್ಮ.—ಎರಡು ಪಂಪುಗಳು ಕೆಟ್ಟು ಹೋಗಿದ್ದವು. ಅವುಗಳನ್ನು ಪುನಃ ಸರಿ ಮಾಡಲಾಗಿದೆ ಎಂಬುದಾಗಿ ವರದಿ ಬಂದಿದೆ. ಮತ್ತೆ ೧೦ ಎಚ್ ಪಿ. ಪಂಪನ್ನು ರಿಪ್ಲೇಸ್ ಮಾಡ ಬೇಕೆಂದು ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಕೇಳಿದ್ದಾರೆ. ಇದರ ಬಗ್ಗೆ ಎಂ ಐ.ಪಿ.ಎಚ್.ಇ ಯ ಚೀಫ್ ಇಂಜಿನಿಯರನ್ನು ಕೇಳಿದ್ದಾರೆ. ಅದಕ್ಕವರು ಬದಲಾಯಿಸುವ ಆವಶ್ಯಕತೆ ಇಲ್ಲ, ಇರತಕ್ಕಂತಹ ಪಂಪ್‌ಗಳೇ ಚೆನ್ನಾಗಿ ಕೆಲಸ ಮಾಡುತ್ತಿವೆ, ನೀರು ಬರುತ್ತಿದೆ ಎಂಬುದಾಗಿ ವರದಿ ಬಂದಿದೆ. ಮತ್ತೆ ವಿ.ಪಿ.ಚೇರ್ಮನ್‌ರವರು ಕೂಡ ಈ ಬಗ್ಗೆ ವರದಯನ್ನು ಕೊಟ್ಟಿದ್ದಾರೆ. ಈಗ ಅಲ್ಲಿರುವ ಎನ್.ಆರ್. ಡಬ್ಲ್ಯೂ.ಕ. ಸ್ಕೀಂ ವಿಲೇಜ್ ಪಂಚಾಯಿತಿಯ ಆಧೀನದಲ್ಲಿ ನಡೆಯುತ್ತಿದೆ. ಈಗ ಇರತಕ್ಕಂತಹ ಪಂಪ್‌ನಿಂದ ಸಾಕಾದಷ್ಟು ನೀರು ಬರುತ್ತಿಲ್ಲ. ಆದನ್ನು ೧೦ ಎಚ್.ಪಿ.ಗೆ ಬದಲಾಯಿಸಬೇಕು, ಆದರ ಖರ್ಚನ್ನು